## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ :** 2015–16ನೇ ಸಾಲಿನಿಂದ ರಾಜ್ಯದಲ್ಲಿ ಅಲ್ಪಸಂಖ್ಯಾತರ ಮೆಟ್ರಿಕ್ ನಂತರದ 70 ವಿದ್ಯಾರ್ಥಿನಿಲಯಗಳನ್ನು ಪ್ರಾರಂಭಿಸಲು ಮಂಜೂರಾತಿ ನೀಡಿ ಹುದ್ದೆಗಳನ್ನು ಸೃಜಿಸುವ ಬಗ್ಗೆ.

**ಓದಲಾಗಿದೆ:** 1. ಸರ್ಕಾರಿ ಆದೇಶ ಸಂಖ್ಯೆ: ಎಂಡಬ್ಲ್ಯೂಡಿ 248 ಎಂಡಿಎಸ್ 2013, ದಿನಾಂಕ: 17.01.2014

2.ನಿರ್ದೇಶಕರು, ಅಲ್ಪಸಂಖ್ಯಾತರ ನಿರ್ದೇಶನಾಲಯ ರವರ ಏಕಕಡತದ ಪ್ರಸ್ತಾವನೆ ಸಂಖ್ಯೆ:ಅಸಂನಿ/ವಿನಿ/ಸಿಆರ್–187/2013–14,ದಿನಾಂಕ:18–2–2014,22–4–2015 ಹಾಗೂ 25–07–2015.

<><><>

**ಪ್ರಸ್ತಾವನೆ:–**

ಮೇಲೆ ಓದಲಾದ (1)ರ ಸರ್ಕಾರಿ ಆದೇಶದಲ್ಲಿ ವಿಶೇಷ ಅಭಿವೃದ್ಧಿ ಯೋಜನೆಯಡಿಯಲ್ಲಿ ಡಾ॥ನಂಜುಂಡಪ್ಪ ವರದಿಯನ್ವಯ ಹಿಂದುಳಿದ/ಅತೀ ಹಿಂದುಳಿದ/ಅತ್ಯಂತ ಹಿಂದುಳಿದ ತಾಲ್ಲೂಕುಗಳಲ್ಲಿನ, ಅಲ್ಪಸಂಖ್ಯಾತರ ವಿದ್ಯಾರ್ಥಿನಿಲಯಗಳ ಕಟ್ಟಡದ ವೆಚ್ಚ ತಲಾ ರೂ.1.00 ಕೋಟಿ ಮತ್ತು ಮೂಲಭೂತ ಸೌಕರ್ಯಕ್ಕೆ ತಲಾ ರೂ.20.00 ಲಕ್ಷಗಳಂತೆ 2013–14ನೇ ಸಾಲಿನಲ್ಲಿ ಲೆಕ್ಕಶೀರ್ಷಿಕೆ:4225–03–277–2–03 (133) ರಡಿಯಲ್ಲಿ ಒದಗಿಸಲಾಗಿರುವ ರೂ.40.00 ಕೋಟಿಗಳ ಅನುದಾನದಲ್ಲಿ ಪ್ರತಿ ವಿದ್ಯಾರ್ಥಿನಿಲಯಕ್ಕೆ ಕಟ್ಟಡ ನಿರ್ಮಾಣಕ್ಕಾಗಿ ರೂ.57.14 ಲಕ್ಷಗಳಂತೆ ಒಟ್ಟು 70 ವಿದ್ಯಾರ್ಥಿನಿಲಯಗಳಿಗೆ ಅನುಮೋದನೆ ನೀಡಿ ಆದೇಶಿಸಿದೆ.

ವಿಶೇಷ ಅಭಿವೃದ್ಧಿ ಯೋಜನೆಯಡಿ 70 ವಿದ್ಯಾರ್ಥಿನಿಲಯಗಳ ಕಟ್ಟಡ ನಿರ್ಮಾಣಕ್ಕೆ 2013–14ನೇ ಸಾಲಿನಲ್ಲಿ ಒದಗಿಸಲಾದ ರೂ.40.00ಕೋಟಿಗಳ ಅನುದಾನದಲ್ಲಿ ಪ್ರತಿ ವಿದ್ಯಾರ್ಥಿನಿಲಯಕ್ಕೆ ರೂ.57.14 ಲಕ್ಷಗಳಂತೆ ಒಟ್ಟು ರೂ.40.00ಕೋಟಿಗಳನ್ನು ಆಯಾ ಜಿಲ್ಲೆಯ ಜಿಲ್ಲಾಧಿಕಾರಿಗಳಿಗೆ ಬಿಡುಗಡೆ ಮಾಡಲಾಗಿದ್ದು, ಕಟ್ಟಡಗಳನ್ನು ನಿರ್ಮಿಸಲು ಕ್ರಮವಹಿಸಲಾಗುತ್ತಿದೆ. ಈ ಕಟ್ಟಡಗಳ ನಿರ್ಮಾಣ ಹಾಗೂ ಮೂಲಭೂತ ಸೌಕರ್ಯಗಳಿಗೆ ಉಳಿಕೆ ಅನುದಾನವನ್ನು 2014–15ನೇ ಸಾಲಿನಲ್ಲಿ ಒದಗಿಸಲಾಗಿರುವ ಆಯವ್ಯಯದಲ್ಲಿ ಪ್ರಗತಿಯನ್ನಾಧರಿಸಿ ಬಿಡುಗಡೆ ಮಾಡಲಾಗಿದೆ.

ಮೇಲೆ (2)ರಲ್ಲಿ ಓದಲಾದ ಪತ್ರದಲ್ಲಿ 70 ಸ್ಥಳಗಳಲ್ಲಿಯೂ ಸಹ ಸದರಿ ವಿದ್ಯಾರ್ಥಿನಿಲಯಗಳ ಕಟ್ಟಡ ನಿರ್ಮಾಣ ಮಾಡುತ್ತಿರುವುದರಿಂದ, 2015–16ನೇ ಸಾಲಿನಿಂದ ವಿದ್ಯಾರ್ಥಿನಿಲಯಗಳಲ್ಲಿ ವಿದ್ಯಾರ್ಥಿಗಳನ್ನು ದಾಖಲಿಸಿ ಪ್ರಾರಂಭಿಸಲು ಹಾಗೂ ವಿದ್ಯಾರ್ಥಿನಿಲಯಗಳ ನಿರ್ವಹಣೆಗೆ ಅವಶ್ಯವಿರುವ ಹುದ್ದೆಗಳೊಂದಿಗೆ ಸೃಜಿಸಿ, ಪ್ರಾರಂಭಿಸಲು ಅನುಮತಿ ಕೋರಿ ನಿರ್ದೇಶಕರು ಅಲ್ಪಸಂಖ್ಯಾತರ ಕಲ್ಯಾಣ ನಿರ್ದೇಶನಾಲಯ ಇವರು ಪ್ರಸ್ತಾವನೆ ಸಲ್ಲಿಸಿರುತ್ತಾರೆ.

8. ಖಾಯಂ ಸಿಬ್ಬಂದಿಗಳನ್ನು ನೇಮಕ ಮಾಡಿಕೊಳ್ಳಲು ಕ್ರಮವಹಿಸತಕ್ಕದ್ದು. ಖಾಯಂ ಸಿಬ್ಬಂದಿ ನೇಮಕವಾಗುವವರೆಗೆ ಹೊರಗುತ್ತಿಗೆ ಆಧಾರದ ಮೇಲೆ ಸಿಬ್ಬಂದಿಗಳನ್ನು ಪಡೆದು ನಡೆಸಲು ಕ್ರಮವಹಿಸತಕ್ಕದ್ದು.
೯. ಮೂಲಭೂತ ಸೌಲಭ್ಯ ಒದಗಿಸುವುದು, ಹೆಚ್ಚುವರಿ ಕೊಠಡಿ, ಕಾಂಪೌಂಡ್ ಗೋಡೆ ಸುಣ್ಣಬಣ್ಣ ಶೌಚಾಲಯ ಹಾಗೂ ಇತರೆ ಅಗತ್ಯ ದುರಸ್ಥಿಗಾಗಿ ನಿರ್ದೇಶಕರು ಕ್ರಮವಹಿಸತಕ್ಕದ್ದು.

ಈ ಸಂಬಂಧ ತಗಲುವ ವೆಚ್ಚವನ್ನು **"ಅಲ್ಪಸಂಖ್ಯಾತರಿಗಾಗಿ ನೂತನ ಹಾಸ್ಟೆಲ್‌ಗಳ ಪ್ರಾರಂಭ"** ಲೆಕ್ಕಶೀರ್ಷಿಕೆ 2225-03-277-2-64 (059) ಮತ್ತು ಲೆಕ್ಕಶೀರ್ಷಿಕೆ 4225-03-277-2-03(386) ರಾಜ್ಯವಲಯ ಯೋಜನೆ 2015-16ನೇ ಸಾಲಿನಲ್ಲಿ ಒದಗಿಸಲಾದ ಅನುದಾನ ರೂ.2532.00 ಲಕ್ಷದಲ್ಲಿ ಭರಿಸತಕ್ಕದ್ದು. ಯಾವುದೇ ಕಾರಣಕ್ಕೂ ಹೆಚ್ಚುವರಿ ಅನುದಾನ ಕೋರತಕ್ಕದ್ದಲ್ಲ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 601 ವೆಚ್ಚ-3/2014, ದಿನಾಂಕ: 19-02-2015 ಹಾಗೂ ಟಿಪ್ಪಣಿ ಸಂಖ್ಯೆ ಆಇ 745 ವೆಚ್ಚ-3/2015, ದಿ:31-12-2015ರಲ್ಲಿ ನೀಡಿರುವ ಸಹಮತಿಯೊಂದಿಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಅಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

ಎಂ.ನಾಗರತ್ನ 25/1/16
(ಎಂ.ನಾಗರತ್ನ)
ಸರ್ಕಾರದ ಜಂಟಿ ಕಾರ್ಯದರ್ಶಿ
ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ.
25/1/16

**ಗೆ,**

1. ಮಹಾಲೇಖಪಾಲರು, (ಅ ಮತ್ತು ಇ ಲೆಕ್ಕ ಪರಿಶೋಧನೆ-1,2), ಕರ್ನಾಟಕ ಬೆಂಗಳೂರು.
2. ಸರ್ಕಾರದ ಕಾರ್ಯದರ್ಶಿ, ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
3. ಸರ್ಕಾರದ ಕಾರ್ಯದರ್ಶಿ, ಶಿಕ್ಷಣ ಇಲಾಖೆ(ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ) ಬಹುಮಹಡಿಗಳ ಕಟ್ಟಡ, ಬೆಂಗಳೂರು.
4. ಸರ್ಕಾರದ ಕಾರ್ಯದರ್ಶಿಗಳು, ಅಲ್ಪಸಂಖ್ಯಾತರ ಕಲ್ಯಾಣ ಹಜ್ ಮತ್ತು ವಕ್ಫ್ ಕಲ್ಯಾಣ ಇಲಾಖೆ, ಬೆಂಗಳೂರು.
5. ಕಾರ್ಯದರ್ಶಿ,ಕರ್ನಾಟಕ ರಾಜ್ಯ ಅಲ್ಪಸಂಖ್ಯಾತರ ಆಯೋಗ, ವಿ.ವಿ.ಗೋಪುರ, ಬೆಂಗಳೂರು
6. ನಿರ್ದೇಶಕರು, ಯೋಜನಾ ಇಲಾಖೆ, (ಪಿ.ಎಂ.ಐ.ವಿಭಾಗ) ಬಹುಮಹಡಿ ಕಟ್ಟಡ, ಬೆಂಗಳೂರು.
7. ನಿರ್ದೇಶಕರು, ಅಲ್ಪಸಂಖ್ಯಾತರ ಕಲ್ಯಾಣ ನಿರ್ದೇಶನಾಲಯ, 20ನೇ ಮಹಡಿ, ವಿ.ವಿ.ಗೋಪುರ, ಬೆಂಗಳೂರು.
8. ನಿರ್ದೇಶಕರು, ರಾಜ್ಯ ಹುಜೂರು ಖಜಾನೆ, ಡಾ॥ ಬಿ.ಆರ್ ಅಂಬೇಡ್ಕರ್ ರಸ್ತೆ, ಬೆಂಗಳೂರು
9. ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ, ಶೇಷಾದ್ರಿಪುರಂ, ಬೆಂಗಳೂರು.
10. ಆಂತರಿಕ ಆರ್ಥಿಕ ಸಲಹೆಗಾರರು, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ವಿಕಾಸ ಸೌಧ, ಬೆಂಗಳೂರು.
11. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ ವೆಚ್ಚ-3 & 9, ವಿಧಾನಸೌಧ, ಬೆಂಗಳೂರು.
12. ಸಂಬಂಧಪಟ್ಟ ಜಿಲ್ಲೆಯ ಜಿಲ್ಲಾಧಿಕಾರಿಗಳು. (ನಿರ್ದೇಶಕರ ಮುಖಾಂತರ)
13. ಸಂಬಂಧಪಟ್ಟ ಜಿಲ್ಲೆಯ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, (ನಿರ್ದೇಶಕರ ಮುಖಾಂತರ)
14. ಮಾನ್ಯ ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು
15. ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ,ಕರ್ನಾಟಕ ಸರ್ಕಾರ, ವಿಧಾನ ಸೌಧ, ಬೆಂಗಳೂರು.
16. ಖಜಾನಾಧಿಕಾರಿಗಳು, ರಾಜ್ಯ ಹುಜೂರು ಖಜಾನೆ, ಬೆಂಗಳೂರು.
17. ಸಂಬಂಧಪಟ್ಟ ಜಿಲ್ಲೆಯ ಖಜಾನಾಧಿಕಾರಿಗಳು (ನಿರ್ದೇಶಕರ ಮುಖಾಂತರ)
18. ಸಂಬಂಧಪಟ್ಟ ಜಿಲ್ಲೆಯ ಜಿಲ್ಲಾ ಅಧಿಕಾರಿಗಳು, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ/ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ. (ನಿರ್ದೇಶಕರ ಮುಖಾಂತರ).
19. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.

ಪ್ರಸ್ತಾವನೆಯನ್ನು ಪರಿಶೀಲಿಸಿ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: MWD 167 MDS 2014, ದಿನಾಂಕ: 25-01-2016.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, ವಿಶೇಷ ಅಭಿವೃದ್ಧಿ ಯೋಜನೆಯಡಿಯಲ್ಲಿ ಡಾ॥ ನಂಜುಂಡಪ್ಪ ವರದಿಯನ್ವಯ, ಹಿಂದುಳಿದ/ಅತೀ ಹಿಂದುಳಿದ/ಅತ್ಯಂತ ಹಿಂದುಳಿದ ತಾಲ್ಲೂಕುಗಳಲ್ಲಿ ಕಳೆದ 2013-14ನೇ ಸಾಲಿನಲ್ಲಿ ಕಟ್ಟಡ ಕಾಮಗಾರಿಗಳನ್ನು ಕೈಗೊಂಡಿರುವ ಅನುಬಂಧದಲ್ಲಿ ಸೂಚಿಸಿರುವ 70 ಸ್ಥಳಗಳಲ್ಲಿ ಮಾತ್ರ 2015-16ನೇ ಸಾಲಿನಿಂದ 50 ಸಂಖ್ಯಾಬಲದೊಂದಿಗೆ ಹೊಸ ಅಲ್ಪಸಂಖ್ಯಾತರ ಮೆಟ್ರಿಕ್ ನಂತರದ ಬಾಲಕ/ಬಾಲಕಿಯರ ವಿದ್ಯಾರ್ಥಿನಿಲಯಗಳನ್ನು ಕೆಳಕಂಡ ಹುದ್ದೆಗಳೊಂದಿಗೆ ಸೃಜಿಸಿ, ಪ್ರಾರಂಭಿಸಲು ಸರ್ಕಾರದ ಮಂಜೂರಾತಿ ನೀಡಿ ಆದೇಶಿಸಿದೆ.

**70 ಅಲ್ಪಸಂಖ್ಯಾತರ ಮೆಟ್ರಿಕ್ ನಂತರದ ಬಾಲಕ/ಬಾಲಕಿಯರ ವಿದ್ಯಾರ್ಥಿನಿಲಯಗಳಿಗೆ ಸೃಜಿಸಲಾದ ಹುದ್ದೆಗಳ ವಿವರ.**

| ಕ್ರ. ಸಂ | ಹುದ್ದೆಯ ಹೆಸರು | ಪ್ರತಿ ವಿದ್ಯಾರ್ಥಿನಿಲಯಕ್ಕೆ ಮಂಜೂರು ಮಾಡಲಾದ ಹುದ್ದೆಗಳು | 70 ವಿದ್ಯಾರ್ಥಿ ನಿಲಯಗಳಿಗೆ ಮಂಜೂರು ಮಾಡಲಾದ ಹುದ್ದೆಗಳು | ನೇಮಕಾತಿ ವಿಧಾನ |
|---|---|---|---|---|
| 1 | ನಿಲಯಪಾಲಕರು | 01 | 70 | ಸಿ & ಆರ್ ನಿಯಮಾನುಸಾರ |
| 2 | ಅಡುಗೆಯವರು | 01 | 70 | ಹೊರಗುತ್ತಿಗೆ |
| 3 | ಅಡುಗೆ ಸಹಾಯಕರು | 02 | 140 | ಹೊರಗುತ್ತಿಗೆ |
| 4 | ರಾತ್ರಿಕಾವಲುಗಾರರು / ಜವಾನ | 01 | 70 | ಹೊರಗುತ್ತಿಗೆ |
| | ಒಟ್ಟು ಹುದ್ದೆಗಳು | 05 | 350 | |

**ಷರತ್ತುಗಳು:**

1. ಪ್ರಸ್ತುತ ಮಂಜೂರು ಮಾಡಿರುವ ಮೆಟ್ರಿಕ್ ನಂತರದ 70 ವಿದ್ಯಾರ್ಥಿನಿಲಯಗಳನ್ನು 2015-16ನೇ ಸಾಲಿನಲ್ಲಿ ಸ್ವಂತ ಕಟ್ಟಡ ನಿರ್ಮಾಣವಾಗುವವರೆಗೆ ಬಾಡಿಗೆ ಕಟ್ಟಡದಲ್ಲಿ ಎಲ್ಲಾ ಮೂಲಭೂತ ಸೌಕರ್ಯಗಳನ್ನು ಒದಗಿಸಿ ಪ್ರಾರಂಭಿಸುವುದು.
2. ಪ್ರತಿ ವರ್ಷ ವಿದ್ಯಾರ್ಥಿಗಳನ್ನು ನಿಗದಿಪಡಿಸಿದ ಅನುಪಾತದಂತೆ ದಾಖಲಾತಿಗೆ ಕ್ರಮವಹಿಸತಕ್ಕದ್ದು.
3. ಪ್ರತಿ ಮೆಟ್ರಿಕ್ ನಂತರದ 70 ವಿದ್ಯಾರ್ಥಿನಿಲಯಗಳಲ್ಲಿ ಶೈಕ್ಷಣಿಕ ಗುಣಮಟ್ಟ ಕಾಪಾಡುವುದರ ಜೊತೆಗೆ ಸುಧಾರಣಾ ಕ್ರಮಗಳನ್ನು ಕೈಗೊಂಡು ಉತ್ತಮ ವಾತಾವರಣ ಕಲ್ಪಿಸುವುದು.
4. ಪ್ರತಿ ಶೈಕ್ಷಣಿಕ ವರ್ಷದ ಪ್ರಾರಂಭದಲ್ಲೇ ವಿದ್ಯಾರ್ಥಿಗಳಿಗೆ ಶುದ್ಧ ಕುಡಿಯುವ ನೀರಿನ ಘಟಕ, ಗ್ರಂಥಾಲಯ, ಟೇಬಲ್, ಚೇರ್, ಅಡುಗೆ ಪಾತ್ರೆ, ಲೇಖನ ಸಾಮಗ್ರಿ, ಕಂಪ್ಯೂಟರ್, ಪ್ರಿಂಟರ್, ಯು.ಪಿ.ಎಸ್‌ಗಳನ್ನು ಅಳವಡಿಸುವುದು, ಸೋಲಾರ್ ಲೈಟಿಂಗ್, ಸೋಲಾರ್ ವಾಟರ್ ಹೀಟರ್, ಹಾಸಿಗೆ, ಹೊದಿಕೆ, ಸಿ.ಸಿ ಕ್ಯಾಮರ ಅಳವಡಿಸುವುದು ಇತ್ಯಾದಿಗಳನ್ನು ಪೂರೈಸತಕ್ಕದ್ದು.
5. ಕಾಲ ಕಾಲಕ್ಕೆ ಮೆಟ್ರಿಕ್ ನಂತರ 70 ವಿದ್ಯಾರ್ಥಿನಿಲಯಗಳಿಗೆ ಒದಗಿಸಿದ ಅನುದಾನದಲ್ಲಿ ನಿರ್ವಹಣೆ ವೆಚ್ಚ, ಸಿಬ್ಬಂದಿ ವೇತನ, ಎಲ್ಲಾ ಮೂಲಭೂತ ಸೌಕರ್ಯ ನೀಡತಕ್ಕದ್ದು.
6. ಪ್ರತಿ ಮೆಟ್ರಿಕ್ ನಂತರ ವಿದ್ಯಾರ್ಥಿನಿಲಯಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳಿಗೆ ಕಾಲ ಕಾಲಕ್ಕೆ ತರಬೇತಿಯನ್ನು ನೀಡತಕ್ಕದ್ದು.
7. ಕರ್ನಾಟಕ ಲೋಕಸೇವಾ ಆಯೋಗ/ಆಯ್ಕೆ ಪ್ರಾಧಿಕಾರ ಮೂಲಕ ಸಿಬ್ಬಂದಿಗಳನ್ನು ನೇಮಕ ಮಾಡಲು ಕ್ರಮವಹಿಸಿ ನೇಮಕಾತಿ ನಂತರ ತರಬೇತಿ ಹಾಗೂ ಮೇಲ್ವಿಚಾರಣೆಯನ್ನು ನಿರ್ದೇಶಕರು ಮಾಡತಕ್ಕದ್ದು.

.....3

**ಸರ್ಕಾರದ ಆದೇಶ ಸಂಖ್ಯೆ: MWD 167 MDS 2015 ದಿನಾಂಕ:25-01-2016ಕ್ಕೆ ಅನುಬಂಧ**

| ಕ್ರ.ಸಂ | ಜಿಲ್ಲೆ | ತಾಲ್ಲೂಕು | ವಿದ್ಯಾರ್ಥಿನಿಲಯ ವಿವರ | ಮಂಜೂರಾತಿ ಸಂಖ್ಯೆ |
|---|---|---|---|---|
| 1 | ಬಳ್ಳಾರಿ | ಸಿರುಗುಪ್ಪ | ಮೆಟ್ರಿಕ್ ನಂತರ ಬಾಲಕರ | 50 |
| 2 | | ಹಡಗಲಿ | ಮೆಟ್ರಿಕ್ ನಂತರ ಬಾಲಕರ | 50 |
| 3 | | ಸಂಡೂರು | ಮೆಟ್ರಿಕ್ ನಂತರ ಬಾಲಕಿಯರ | 50 |
| 4 | ಗುಲ್ಬರ್ಗಾ | ಸೇಡಂ ಟೌನ್ | ಮೆಟ್ರಿಕ್ ನಂತರ ಬಾಲಕರ | 50 |
| 5 | ಯಾದಗಿರಿ | ಸುರಪುರ | ಮೆಟ್ರಿಕ್ ನಂತರ ಬಾಲಕರ | 50 |
| 6 | | ಶಹಾಪೂರ | ಮೆಟ್ರಿಕ್ ನಂತರ ಬಾಲಕರ | 50 |
| 7 | | | ಮೆಟ್ರಿಕ್ ನಂತರ ಬಾಲಕಿಯರ | 50 |
| 8 | ಕೊಪ್ಪಳ | ಕೊಪ್ಪಳ | ಮೆಟ್ರಿಕ್ ನಂತರ ಬಾಲಕರ | 50 |
| 9 | | ಕುಷ್ಟಗಿ | ಮೆಟ್ರಿಕ್ ನಂತರ ಬಾಲಕರ | 50 |
| 10 | ರಾಯಚೂರು | ರಾಯಚೂರು | ಮೆಟ್ರಿಕ್ ನಂತರ ವೃತ್ತಿಪರ ಬಾಲಕರ | 50 |
| 11 | | ದೇವದುರ್ಗಾ | ಮೆಟ್ರಿಕ್ ನಂತರ ಬಾಲಕಿಯರ | 50 |
| 12 | | ಮುದಗಲ್ (ಲಿಂಗಸೂಗೂರು) | ಮೆಟ್ರಿಕ್ ನಂತರ ಬಾಲಕರ | 50 |
| 13 | | ಮಾನ್ವಿ | ಮೆಟ್ರಿಕ್ ನಂತರ ಬಾಲಕರ | 50 |
| 14 | ಬೆಳಗಾಂ | ಹುಕ್ಕೇರಿ | ಮೆಟ್ರಿಕ್ ನಂತರ ಬಾಲಕರ | 50 |
| 15 | | ರಾಮದುರ್ಗ | ಮೆಟ್ರಿಕ್ ನಂತರ ಬಾಲಕಿಯರ | 50 |
| 16 | | ರಾಯಭಾಗ (ಕುಡಚಿ) | ಮೆಟ್ರಿಕ್ ನಂತರ ಬಾಲಕರ | 50 |
| 17 | | ಸವದತ್ತಿ | ಮೆಟ್ರಿಕ್ ನಂತರ ಬಾಲಕರ | 50 |
| 18 | | ಗೋಕಾಕ್ | ಮೆಟ್ರಿಕ್ ನಂತರ ಬಾಲಕರ | 50 |
| 19 | | ಅಥಣಿ | ಮೆಟ್ರಿಕ್ ನಂತರ ಬಾಲಕರ | 50 |
| 20 | ಬಿಜಾಪುರ | ಇಂಡಿ | ಮೆಟ್ರಿಕ್ ನಂತರ ಬಾಲಕರ | 50 |
| 21 | | ಮುದ್ದೇಬಿಹಾಳ | ಮೆಟ್ರಿಕ್ ನಂತರ ಬಾಲಕರ | 50 |
| 22 | | ಬಿ.ಬಾಗೇವಾಡಿ | ಮೆಟ್ರಿಕ್ ನಂತರ ಬಾಲಕರ | 50 |
| 23 | | ಬಿಜಾಪುರ | ಮೆಟ್ರಿಕ್ ನಂತರ ಬಾಲಕರ | 50 |
| 24 | | ಸಿಂಧಗಿ | ಮೆಟ್ರಿಕ್ ನಂತರ ಬಾಲಕರ | 50 |
| 25 | ಬಾಗಲಕೋಟೆ | ಬೀಳಗಿ | ಮೆಟ್ರಿಕ್ ನಂತರ ಬಾಲಕರ | 50 |
| 26 | | ಇಳಕಲ್ (ಹುನಗುಂದ) | ಮೆಟ್ರಿಕ್ ನಂತರ ಬಾಲಕರ | 50 |
| 27 | | ಬಾದಾಮಿ | ಮೆಟ್ರಿಕ್ ನಂತರ ಬಾಲಕಿಯರ | 50 |
| 28 | ಗದಗ | ಮುಂಡರಗಿ | ಮೆಟ್ರಿಕ್ ನಂತರ ಬಾಲಕಿಯರ | 50 |
| 29 | | ರೋಣ | ಮೆಟ್ರಿಕ್ ನಂತರ ಬಾಲಕರ | 50 |
| 30 | | ಶಿರಹಟ್ಟಿ (ಲಕ್ಷ್ಮೇಶ್ವರ) | ಮೆಟ್ರಿಕ್ ನಂತರ ಬಾಲಕರ | 50 |
| 31 | ಹಾವೇರಿ | ಸವಣೂರು | ಮೆಟ್ರಿಕ್ ನಂತರ ಬಾಲಕರ | 50 |
| 32 | | ಹಿರೇಕೆರೂರು | ಮೆಟ್ರಿಕ್ ನಂತರ ಬಾಲಕರ | 50 |
| 33 | | ಬ್ಯಾಡಗಿ | ಮೆಟ್ರಿಕ್ ನಂತರ ಬಾಲಕರ | 50 |
| 34 | ಉತ್ತರಕನ್ನಡ | ಸಿದ್ದಾಪುರ | ಮೆಟ್ರಿಕ್ ನಂತರ ಬಾಲಕರ | 50 |
| 35 | | ಭಟ್ಕಳ | ಮೆಟ್ರಿಕ್ ನಂತರ ಬಾಲಕರ | 50 |

70 Hostel 50



| | | | | |
|---|---|---|---|---|
| 36 | ರಾಮನಗರ | ಮಾಗಡಿ | ಮೆಟ್ರಿಕ್ ನಂತರ ಬಾಲಕರ | 50 |
| 37 | | ಚೆನ್ನಪಟ್ಟಣ | ಮೆಟ್ರಿಕ್ ನಂತರ ಬಾಲಕಿಯರ | 50 |
| 38 | | ಕನಕಪುರ ಟೌನ್ | ಮೆಟ್ರಿಕ್ ನಂತರ ಬಾಲಕರ | 50 |
| 39 | ಚಿತ್ರದುರ್ಗ | ಹೊಸದುರ್ಗ | ಮೆಟ್ರಿಕ್ ನಂತರ ಬಾಲಕಿಯರ | 50 |
| 40 | | ಹಿರಿಯೂರು | ಮೆಟ್ರಿಕ್ ನಂತರ ಬಾಲಕರ | 50 |
| 41 | | ಮೊಳಕಾಲ್ಮೂರು | ಮೆಟ್ರಿಕ್ ನಂತರ ಬಾಲಕರ | 50 |
| 42 | | ಚಳ್ಳಕೆರೆ | ಮೆಟ್ರಿಕ್ ನಂತರ ಬಾಲಕರ | 50 |
| 43 | ಬೆಂಗಳೂರು ನಗರ | ಆನೇಕಲ್ | ಮೆಟ್ರಿಕ್ ನಂತರ ಬಾಲಕರ | 50 |
| 44 | ದಾವಣಗೆರೆ | ಚನ್ನಗಿರಿ | ಮೆಟ್ರಿಕ್ ನಂತರ ಬಾಲಕರ | 50 |
| 45 | | ಜಗಳೂರು | ಮೆಟ್ರಿಕ್ ನಂತರ ಬಾಲಕರ | 50 |
| 46 | | ಹರಪ್ಪನಹಳ್ಳಿ | ಮೆಟ್ರಿಕ್ ನಂತರ ಬಾಲಕಿಯರ | 50 |
| 47 | ಕೋಲಾರ | ಮುಳಬಾಗಿಲು | ಮೆಟ್ರಿಕ್ ನಂತರ ಬಾಲಕರ | 50 |
| 48 | | ಬಂಗಾರಪೇಟೆ | ಮೆಟ್ರಿಕ್ ನಂತರ ಬಾಲಕರ | 50 |
| 49 | | ಮಾಲೂರು | ಮೆಟ್ರಿಕ್ ನಂತರ ಬಾಲಕರ | 50 |
| 50 | ಚಿಕ್ಕಬಳ್ಳಾಪುರ | ಚಿಂತಾಮಣಿ | ಮೆಟ್ರಿಕ್ ನಂತರ ಬಾಲಕಿಯರ | 50 |
| 51 | | ಬಾಗೇಪಲ್ಲಿ | ಮೆಟ್ರಿಕ್ ನಂತರ ಬಾಲಕರ | 50 |
| 52 | | ಗೌರಿಬಿದನೂರು | ಮೆಟ್ರಿಕ್ ನಂತರ ಬಾಲಕರ | 50 |
| 53 | ಶಿವಮೊಗ್ಗ | ಶಿಕಾರಿಪುರ | ಮೆಟ್ರಿಕ್ ನಂತರ ಬಾಲಕಿಯರ | 50 |
| 54 | ತುಮಕೂರು | ಶಿರಾ | ಮೆಟ್ರಿಕ್ ನಂತರ ಬಾಲಕರ | 50 |
| 55 | | ಶಿರಾ | ಮೆಟ್ರಿಕ್ ನಂತರ ಬಾಲಕಿಯರ | 50 |
| 56 | | ಕೊರಟಗೆರೆ | ಮೆಟ್ರಿಕ್ ನಂತರ ಬಾಲಕರ | 50 |
| 57 | | ಮಧುಗಿರಿ | ಮೆಟ್ರಿಕ್ ನಂತರ ಬಾಲಕರ | 50 |
| 58 | | ಮಧುಗಿರಿ | ಮೆಟ್ರಿಕ್ ನಂತರ ಬಾಲಕಿಯರ | 50 |
| 59 | ಹಾಸನ | ಅರಸೀಕೆರೆ | ಮೆಟ್ರಿಕ್ ನಂತರ ಬಾಲಕರ | 50 |
| 60 | | ಚೆನ್ನರಾಯಪಟ್ಟಣ | ಮೆಟ್ರಿಕ್ ನಂತರ ಬಾಲಕಿಯರ | 50 |
| 61 | | ಚೆನ್ನರಾಯಪಟ್ಟಣ | ಮೆಟ್ರಿಕ್ ನಂತರ ಬಾಲಕರ | 50 |
| 62 | ಮಂಡ್ಯ | ಕೆ.ಆರ್.ಪೇಟೆ | ಮೆಟ್ರಿಕ್ ನಂತರ ಬಾಲಕರ | 50 |
| 63 | | ನಾಗಮಂಗಲ | ಮೆಟ್ರಿಕ್ ನಂತರ ಬಾಲಕರ | 50 |
| 64 | | ಮದ್ದೂರು | ಮೆಟ್ರಿಕ್ ನಂತರ ಬಾಲಕರ | 50 |
| 65 | | ಮಳವಳ್ಳಿ | ಮೆಟ್ರಿಕ್ ನಂತರ ಬಾಲಕರ | 50 |
| 66 | ಮೈಸೂರು | ಟಿ. ನರಸೀಪುರ | ಮೆಟ್ರಿಕ್ ನಂತರ ಬಾಲಕರ | 50 |
| 67 | | ನಂಜನಗೂಡು | ಮೆಟ್ರಿಕ್ ನಂತರ ಬಾಲಕಿಯರ | 50 |
| 68 | | ಹುಣಸೂರು | ಮೆಟ್ರಿಕ್ ನಂತರ ಬಾಲಕರ | 50 |
| 69 | ಚಾಮರಾಜನಗರ | ಗುಂಡ್ಲುಪೇಟೆ | ಮೆಟ್ರಿಕ್ ನಂತರ ಬಾಲಕರ | 50 |
| 70 | | ಕೊಳ್ಳೆಗಾಲ | ಮೆಟ್ರಿಕ್ ನಂತರ ಬಾಲಕರ | 50 |
| | | **ಒಟ್ಟು** | | **3500** |

ಎಂ.ನಾಗರತ್ನ
(ಎಂ.ನಾಗರತ್ನ)
ಸರ್ಕಾರದ ಜಂಟಿ ಕಾರ್ಯದರ್ಶಿ
ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ.